**1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ**

**ನ್ಯಾಯಾಲಯದಲ್ಲಿ ಬೆಳಗಾವಿ**

**SC. No: 162/2025**

CW. No: 6
**PW. No: 7**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿಕಂದರ ಯಲಿಗಾರ |
| ತಂದೆಯ ಹೆಸರು | : | ಮುಕ್ತುಮಸಾಬ ಯಲಿಗಾರ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಕೂಲಿ |
| ವಾಸ್ತವ್ಯ | : | ಮುನವಳ್ಳಿ, ತಾಃ ಸವದತ್ತಿ |

ಇಂದು ದಿನಾಂಕಃ 01.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ನನಗೆ ಮೃತ ಮಕ್ತುಮಸಾಬ , ಚಾಸಾ.7 ಹಾಗೂ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಪರಿಚಯವಿರುತ್ತದೆ. ಮಕ್ತುಮಸಾಬ ಈಗ ಒಂದು ವರ್ಷದ ಹಿಂದೆ ತೀರಿಕೊಂಡಿರುತ್ತಾನೆ. ಅವನುನ ಹೇಗೆ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ.

2. ಈಗ್ಗೆ ಒಂದು ವರ್ಷದ ಹಿಂದೆ ಒಂದು ದಿನ ನಾನು ಮತ್ತು ಆರೋಪಿ ಚುಳಕಿ ಗ್ರಾಮಕ್ಕೆ ಮೃತ ಮಕ್ತುಮಸಾಬನ ಕೈಕೆಳಗೆ ಗೌಂಡಿ ಕೆಲಸಕ್ಕೆ ಹೋಗಿದ್ದೆವು. ಗೌಂಡಿ ಕೆಲಸ ಮುಗಿಸಿಕೊಂಡು ಸಾಯಂಕಾಲ 06.00 ಗಂಟೆ ಸಮಯದಲ್ಲಿ ನಾವು ಮೂರು ಜನ ಹೊಸ ಬಟ್ಟೆ ಖರೀದಿಸಲು ಸವದತ್ತಿಗೆ ಬಂದಿರುತ್ತೇವೆ. ಮಕ್ತುಮಸಾಬ ಮತ್ತು ಆರೋಪಿ ನನ್ನನ್ನು ಎರಡು ಬಟ್ಟೆ ಅಂಗಡಿಗೆ ಕರೆದುಕೊಂಡು ಹೋದರು. ಅವರಿಗೆ ಯಾವುದೇ ಬಟ್ಟೆ ಹಿಡಿಸಲಿಲ್ಲ, ಆದ್ದರಿಂದ ನನ್ನನ್ನು ಮನೆಗೆ ಹೋಗುವಂತೆ ಹೇಳಿದರು. ಆ ದಿನ ನಮ್ಮ ಜೊತೆ ಮೃತ ಮಕ್ತುಮಸಾಬನ ಅಣ್ಣನ ಮಗ ಚಾಸಾ.7ರವರು ಹಾಜರಿದ್ದರು. ಬಟ್ಟೆ ಅಂಗಡಿಗೆ ಹೋಗುವ ಮೊದಲು ಆರೋಪಿಗೆ ಮತ್ತು ಮಕ್ತುಮಸಾಬನ ನಡುವೆ ಯಾವುದೇ ಜಗಳವಾಗಿರಲಿಲ್ಲ. ನನಗೆ ಬೇರೆ ಯಾವುದೇ ವಿಷಯ ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ ಮೇರೆಗೆ**

**ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ನಾನು ಮತ್ತು ಆರೋಪಿ ಕೆಲಸಕ್ಕೆ ಹೋದ ದಿನಾಂಕ 04.06.2025 ಎಂದರೆ ಸರಿ. ಆ ದಿನ ನಾವು ಚುಳಕಿ ಗ್ರಾಮದ ಚಾಸಾ.11ರವರ ಮನೆಯ ಟಾಯ್ಲೆಟ್ ಕಟ್ಟಲು ಹೋಗಿದ್ದೆವು ಎಂದರೆ ಸರಿ. ನಾವು ಸವದತ್ತಿಗೆ ಹೋಗುವಾಗ ಮೃತ ಮಕ್ತುಮಸಾಬ ಆರೋಪಿಯ ಕಡೆಯಿಂದ ರೂ.2,000/- ಸಾಲ ಪಡೆದಿದ್ದನು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಮಕ್ತುಮಸಾಬನಿಗೆ ಕೂಲಿ ಮತ್ತು ತಾನು ಕೊಟ್ಟ ರೂ.2,000/- ಕೊಡುವಂತೆ ಕೇಳಿದನು ಎಂದರೆ ಸರಿ. ಮಕ್ತುಮಸಾಬನು ಈಗ ಕೂಲಿ ಕೊಟ್ಟರೆ ಪುನಃ ನೀನು ಕೆಲಸಕ್ಕೆ ಬರುವುದಿಲ್ಲ, ಆದ್ದರಿಂದ ಹಣವನ್ನು ಕೆಲಸ ಮುಗಿದ ಮೇಲೆ ಕೊಡುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಈ ವಿಷಯವಾಗಿ ಇಬ್ಬರ ನಡುವೆ ಜಗಳಾಯಿತು, ಆ ಸಮಯದಲ್ಲಿ ನಾನು ಹಾಜರಿದ್ದೆನು ಎಂದರೆ ಸರಿಯಲ್ಲ.

4. ನಂತರ ದಿನಾಂಕ 05.06.2025ರಂದು ಬೆಳಗ್ಗೆ 01.00 ಗಂಟೆ ಸಮಯದಲ್ಲಿ ಹಣಕಾಸಿನ ವಿಚಾರವಾಗಿ ಆರೋಪಿ ಮತ್ತು ಮಕ್ತುಮಸಾಬ ಜಗಳವಾಡಿ ಆರೋಪಿಯು ಮಕ್ತುಮಸಾಬನಿಗೆ ಚಹರೆ ಕಲ್ಲಿನಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾನೆ ಎಂದು ನನಗೆ ಕೇಳಿ ಗೊತ್ತಾಯಿತು ಎಂದರೆ ಸರಿಯಲ್ಲ. ಅದೇ ರೀತಿ ನೀವು ಈಗ ಓದಿ ಹೇಳಿದಂತೆ, 'ನಾವು ಸವದತ್ತಿಗೆ ಬರುವಾಗ ಮಕ್ತುಮಸಾಬನು ಮಹ್ಮದರಫೀಕನ ಹತ್ತಿರ ಆಮೇಲೆ ಕೊಡುತ್ತೇನೆ 2 ಸಾವಿರ ರೂಪಾಯಿ ಸಾಲ ಕೊಡು ಅಂತಾ ಅವನ ಕಡೆಗೆ ಇಸಿದುಕೊಂಡನು...............................................................................
.......................ಕಲ್ಲನ್ನು ತೆಗೆದುಕೊಂಡು ತಲೆಗೆ ಮೇಲೆ ಒಗೆದು ಅವನಿಗೆ ಭಾರಿಗಾಯಪಡಿಸಿ ಸ್ಥಳದಲ್ಲಿ ಮರಣ ಪಡಿಸಿದ ನಂತರ ಅಲ್ಲಿಂದ ಹೋಗಿದ್ದು ಇರುತ್ತದೆ ಅಂತಾ ತಮ್ಮಿಂದ ಮತ್ತು ಮಹ್ಮದರಫೀಕನಿಂದ ಕೇಳಿ ಗೊತ್ತಾಗಿದ್ದು ಇರುತ್ತದೆ.' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-36 ಎಂದು ಗುರುತಿಸಲಾಯಿತು.

5. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ, ಆರೋಪಿಯೇ ಮೃತ ಮಕ್ತುಮಸಾಬನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿರುತ್ತಾನೆ ಎಂಬ ವಿಷಯ ತಿಳಿದಿದ್ದರೂ, ನಿಪಿ-36ರಂತೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.